ಖಡಿ ರಸ್ತೆಗಳು - 3, ಖರ್ಚಾದ ಹಣ ರೂ. 53,160-00

ಕಲ್ಲಿನ ಹೊದಿಕೆ ರಸ್ತೆ-1, ಖರ್ಚಾದ ಹಣ ರೂ. 6,300-00

ಇ) ಹೊಸದಾಗಿ ಹುಟ್ಟಿಕೊಂಡಿರುವ ಅನಧಿಕೃತ ಬಡಾವಣೆಗಳಲ್ಲಿಯ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡಿದ್ದರೆ ಅವುಗಳನ್ನು ಪರಿಶೀಲಿಸಿ ಮಹಾನಗರಸಭೆಗೆ ಹಸ್ತಾಂತರ ಮಾಡಿಕೊಂಡು ವಿದ್ಯುತ್ ಹಾಗೂ ಮೂಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಅನಧಿಕೃತ ಬಡಾವಣೆಗಳಿಗೆ ಮೂಲಕ ಸೌಲಭ್ಯ ಒದಗಿಸಲಾಗುವುದಿಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಆರೋಗ್ಯ ಪರಿವೀಕ್ಷಕರು

116 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯಲ್ಲಿ ಎಷ್ಟು ಜನ ಆರೋಗ್ಯ ಪರಿವೀಕ್ಷಕರು ಹಾಗೂ ಎಲ್ಲೆಲ್ಲಿದ್ದಾರೆ?

ಆ) ಯಾವ ಪರಿವೀಕ್ಷಕರ ಮೇಲಾದರೂ ಪ್ರಜೆಗಳು ದೂರು ನೀಡಿರುವ ಪ್ರಯುಕ್ತ ದೂರು ಕ್ರಮ ಕೈಗೊಳ್ಳಲಾಗಿದೆಯೇ? (ಏವರ ನೀಡುವುದು)

ಇ) ಕಸ ಗೂಡಿಸುವ ಕಾರ್ಮಿಕರ ಸಂಖ್ಯೆ ಎಷ್ಟು?

ಈ) ಪರಿವೀಕ್ಷಕರಿಗೆ ಹಾಗೂ ಕಸ ಗುಡಿಸುವವರಿಗೆ ಪ್ರತಿ ವರುಷ ಎಷ್ಟು ಹಣ ಸಂಬಳ ಕೊಡುತ್ತಿದೆ?

ಉ) ಸದ್ಯ ಇವರಿಂದ ಅವಳಿನಗರಗಳನ್ನು ಸ್ವಚ್ಛತೆ ಇಡಲು ಸಾಧ್ಯವೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಒಟ್ಟು - 3. ಹುಬ್ಬಳ್ಳಿಯಲ್ಲಿ - 2. ಧಾರವಾಡದಲ್ಲಿ - 1

ಆ) ಇವರ ಮೇಲೆ ಅಂಥ ಯಾವುದೇ ದೂರುಗಳು ಸಾರ್ವಜನಿಕರಿಂದ ಬಂದಿರುವುದಿಲ್ಲ.

ಇ) ಒಟ್ಟು 1190 ಪೌರ ಕಾರ್ಮಿಕರಿದ್ದು ಇದಲ್ಲದೇ 46 ಜನರು ದಿನಗೂಲಿ ತಳಹದಿಯ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ.

ಈ) ರೂ. 3,80,40,000-00

ಉ) ಈಗಿನ ಸಿಬ್ಬಂದಿಯಿಂದ ಪೂರ್ತಿ ನಗರವನ್ನು ಸ್ವಚ್ಛ ಇಡಲು ಕಷ್ಟಕರವಾಗುತ್ತದೆ. ಹೆಚ್ಚಿನ ಸಿಬ್ಬಂದಿಯು ಅವಶ್ಯಕತೆ ಇದೆ. ಆದರೆ ಈ ಹೆಚ್ಚಿನ ಪೌರ ಕಾರ್ಮಿಕರ ನೇಮಕಾತಿಯಿಂದ ಮಹಾನಗರಸಭೆ ಅಧಿಕ ಆರ್ಥಿಕ ಹೊರೆ ಆಗುವುದರಿಂದ, ಮಹಾನಗರಪಾಲಿಕೆಯು ಕೆಲವು ಪ್ರದೇಶಗಳಲ್ಲಿನ ಕಸವನ್ನು ತೆಗೆಯುವ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯಲ್ಲಿ ನೀರಿನ ಪೂರೈಕೆಗಾಗಿ ಇರುವ ಓವರ್ ಹೆಚ್ ಟ್ಯಾಂಕುಗಳ ಸಂಖ್ಯೆ

117 - ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯಲ್ಲಿ ನೀರಿನ ಪೂರೈಕೆಗಾಗಿ ಇರುವ ಓವರ್‌ಹೆಡ್ ಟ್ಯಾಂಕುಗಳ ಸಂಖ್ಯೆ ಎಷ್ಟು? 1993 ರಿಂದ ಎಷ್ಟು ಪೈಪುಗಳ ಜೋಡಣೆ ಆಗಿದೆ; ಹಾಗೂ ಈ ಬಗ್ಗೆ ಆದ ಖರ್ಚು ಎಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 15 ಓವರ್ ಹೆಚ್ ಟ್ಯಾಂಕುಗಳು.

1993 ರಿಂದ ಈಚೆಗೆ 1,11,850 ಮೀಟರ್ ಕೊಳವೆ ಜೋಡಣೆ ಮಾಡಿದೆ.

ಕಬ್ಬನ್ನು ಅರೆಯಲು ಸಕ್ಕರೆ ಕಾರ್ಖಾನೆಗಳ ಸಾಮರ್ಥ್ಯ ಮತ್ತು ಉಳಿಯುವ ಬೆಳೆಯ ಪರಿಸ್ಥಿತಿ

182 -ಶ್ರೀ ಬಿ. ಶಿವರಾಮು (ಗಂಡಸೀ) : ಮಾನ್ಯ ಸಕ್ಕರೆ, ಜವಳಿ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ರಾಜ್ಯದಲ್ಲಿ ಹಾಲಿ ಇರುವ ಕಬ್ಬಿನ ಬೆಳೆಯ ಪ್ರದೇಶವೆಷ್ಟು?

ಆ) ರಾಜ್ಯದಲ್ಲಿ ಹಾಲಿ 10 ತಿಂಗಳು ಮೀರಿರುವ ಕಬ್ಬಿನ ಬೆಳೆಯ ಪ್ರದೇಶವೆಷ್ಟು?

ಇ) ಸಕ್ಕರೆಯನ್ನು ಉತ್ಪಾದನೆ ಮಾಡಲು ಸಾಮರ್ಥ್ಯ ಹೊಂದಿರುವ ಸಕ್ಕರೆ ಕಾರ್ಖಾನೆಗಳು ರಾಜ್ಯದಲ್ಲಿ ಎಷ್ಟಿದೆ ಮತ್ತು ಅವುಗಳ ಸಾಮರ್ಥ್ಯವೆಷ್ಟು ದಿನಕ್ಕೆ ಎಷ್ಟು ಎಕರೆ ಪ್ರದೇಶದ ಕಬ್ಬನ್ನು ಪ್ರತಿನಿತ್ಯ ಅರೆಯಲು ಸಾಮರ್ಥ್ಯವಿದೆ.

ಈ) ಬೆಳೆದಿರುವ ಕಬ್ಬನ್ನು ಅರೆಯಲು ರಾಜ್ಯದ ಕಾರ್ಖಾನೆಗಳಲ್ಲಿ ಸಾಮರ್ಥ್ಯವಿಲ್ಲದೆ ಉಳಿಯುವ ಪ್ರದೇಶವೆಷ್ಟು (ಮೆಟ್ರಿಕ್ ಟನ್‌ನಲ್ಲಿ ಮಾಹಿತಿ ಒದಗಿಸುವುದು)

ಉ) ಉಳಿದ ಪ್ರದೇಶದ ಕಬ್ಬನ್ನು ಅರೆಯಲು ಸರ್ಕಾರ ಏನಾದರೂ ಯೋಜನೆಯನ್ನು ರೂಪಿಸಿದೆಯೇ? ರೂಪಿಸಿದ್ದರೆ ವಿವರಗಳನ್ನು ಒದಗಿಸುವುದು.

ಶ್ರೀ ಪಿ.ಸಿ. ಸಿದ್ದನಗೌಡರ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಹಾಲಿ ಸುಮಾರು 2.61 ಲಕ್ಷ ಹೆಕ್ಟೇರ್ ಪ್ರದೇಶವಿರುವ ಅಂದಾಜಿರುತ್ತದೆ.

ಇ) ಸಕ್ಕರೆಯನ್ನು ಉತ್ಪಾದನೆ ಮಾಡಲು ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳಿವೆ ಮತ್ತು ಇವುಗಳ ಒಟ್ಟು ದಿನವಹಿ ಕಬ್ಬು ಅರೆಯುವ ಸಾಮರ್ಥ್ಯ 71950 ಟನ್‌ಗಳಾಗಿರುತ್ತದೆ. ಈ ಕಾರ್ಖಾನೆಗಳು ದಿನಕ್ಕೆ ಸುಮಾರು 2250 ಎಕರೆ ಪ್ರದೇಶದಿಂದ ಕಬ್ಬನ್ನು ಪ್ರತಿನಿತ್ಯ ಅರೆಯಲು ಸಾಮರ್ಥ್ಯವಿದೆ.

ಈ) ಬೆಳೆದಿರುವ ಕಬ್ಬನ್ನು ಅರೆಯಲು ರಾಜ್ಯದ ಕಾರ್ಖಾನೆಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅರೆದ ಮೇಲೆ ಉತ್ಪಾದನೆ ಅಂದಾಜು ಮಾಡಿರುವ ಕಬ್ಬಿನಲ್ಲಿ ಸುಮಾರು 94 ಲಕ್ಷ ಟನ್ ಕಬ್ಬು ಉಳಿಯಬಹುದೆಂದು ಅಂದಾಜು ಮಾಡಲಾಗಿದೆ.

ಉ) ನಮ್ಮ ರಾಜ್ಯದಲ್ಲಿ ಬೆಳೆದ ಹೆಚ್ಚುವರಿ ಕಬ್ಬನ್ನು ಮಹಾರಾಷ್ಟ್ರ ಸರ್ಕಾರದ ಕಾರ್ಖಾನೆಗಳು ಖರೀದಿಸುವಂತೆ ಕೋರಲು ಪ್ರಯತ್ನಿಸಲಾಗಿದೆ.

ಕಬ್ಬಿನ ಗಾಣಗಳು ಹಾಗೂ ಖಂಡಸಾರಿ ಘಟಕಗಳ ಕಬ್ಬು ಅರೆಯುವ ಪರವಾನಿಗೆ ನವೀಕರಣದ ಮೇಲೆ ಇದ್ದ ನಿರ್ಬಂಧಗಳನ್ನು ಪ್ರಸಕ್ತ ಸಾಲಿಗೆ ಸಡಿಲಿಸಲಾಗಿದೆ. ಕಬ್ಬು ಹೆಚ್ಚುವರಿ ಇರುವ ಪ್ರದೇಶದಿಂದ ಕೊರತೆ ಇರುವ ಕಾರ್ಖಾನೆಗಳಿಗೆ ಸಾಗಾಣಿಕೆ ಆಗುವುದಕ್ಕೆ ಅನುಮತಿಸಲಾಗಿದೆ. ಹಾಗೂ ಹೊರ ರಾಜ್ಯಕ್ಕೆ ಸಾಗಾಣಿಕೆ ಆಗಲು ಸಹ ಅನುಮತಿಸಲಾಗಿದೆ. ರಾಜ್ಯದೊಳಗಿನ ಕಬ್ಬು ಕೊರತೆಯಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ಪ್ರದೇಶದಿಂದ ಎತ್ತುವಳಿ ಮಾಡುವ ಪ್ರತಿ ಟನ್ ಕಬ್ಬಿಗೆ ಪ್ರತಿ ಕಿ.ಮೀ.ಗೆ 0.50 ಪೈಸೆಯಂತೆ (250 ಕಿ.ಮೀ.ಗೆ ಮೀರದಂತೆ) ಸರ್ಕಾರವು ಸಹಾಯಧನ ನೀಡುತ್ತದೆ. ಅಲ್ಲದೆ, ಕಾರ್ಖಾನೆಗಳು ಕಬ್ಬು ಅರೆಯುವ ಅವಧಿಯನ್ನು ರೈತರ ಹಿತದೃಷ್ಟಿಯಿಂದ